ಸೆಲೆಬ್ರಿಟಿ

■ ಹನಿ

## ಕಂಬಿಗಳ ಹಿಂದೆ..

ಕವಿ, ಪತ್ರಕರ್ತೆ, ರಾಜ್ಯಸಭಾ ಸದಸ್ಯೆ.. ಮೇಲಾಗಿ ಸುಂದರಿ! ಉಹುಂ– ಯಾವುದೂ ನೆರವಿಗೆ ಬರಲಿಲ್ಲ. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಂ.ಕರುಣಾನಿಧಿಯ ಮುದ್ದಿನ ಮಗಳು ಕನಿಮೋಳಿ ಭ್ರಷ್ಟಾಚಾರದ ಆರೋಪ ಮೇಲೆ ತಿಹಾರ್ ಜೈಲು ಸೇರಿದ್ದಾರೆ. ಸುಖದ ಸುಪ್ಪತ್ತಿಗೆಯ ಮೇಲಿದ್ದ ಹೆಣ್ಣುಮಗಳು ಕಂಬಿಯ ಹಿಂದೆ 'ಕಣ್ಣೀರ ಮೋಳಿ' ಆಗಿದ್ದಾರೆ. 'ಎಕನಾಮಿಕ್ಸ್ ಎಂ.ಎ ಮಾಡಿದವರು ಆರ್ಥಿಕ ಅಪರಾಧಗಳನ್ನು ಮಾಡಲೇಬಾರದು' ಎಂದೇನೂ ಇಲ್ಲವಲ್ಲ! ಮದ್ರಾಸ್ ವಿಶ್ವ-ವಿದ್ಯಾನಿಲಯದ ಅರ್ಥಶಾಸ್ತ್ರ ಎಂ.ಎ ಕೂಡಾ ಕನಿಮೋಳುವಿನ ಜತೆಗೇ ಜೈಲು ಸೇರಿದೆ. ಕೆಲವೇ ತಿಂಗಳ ಹಿಂದೆ ಕನಿಮೋಳಿಯ ಅಧಿಕಾರವನ್ನು ಕಂಡು ಕರುಬುವವರಿದ್ದರು. 'ದಿ ಹಿಂದೂ' ಪತ್ರಿಕೆಯಲ್ಲಿ ಉಪಸಂಪಾದಕಿಯಾಗಿ, 'ಕುಂಕುಮಂ' ವಾರ ಪತ್ರಿಕೆಯ ಇನ್‌ಚಾರ್ಜ್ ಎಡಿಟರ್ ಆಗಿ, ಸಿಂಗಾಪುರದಿಂದ ಪ್ರಕಟವಾಗುತ್ತಿದ್ದ 'ತಮಿಳು ಮರಸು' ಪತ್ರಿಕೆಯ ಫೀಚರ್ ಎಡಿಟರ್ ಆಗಿ ಇದೇ ಕನಮೋಳಿ ಕೆಲಸ ಮಾಡಿದ್ದರು. ಈಗ ಅವರ ಮೇಲೆಯೇ ದೇಶದ ಎಲ್ಲ ಭಾಷೆಗಳ ಪತ್ರಿಕೆಗಳೂ ಫೀಚರ್ ಮಾಡುವ ಸ್ಥಿತಿ ಬಂದಿದೆ. ಔಟ್‌ಲುಕ್ ಪತ್ರಿಕೆಯಲ್ಲಿ 2ಜಿ



ಸ್ಪೆಕ್ಟ್ರಂ ಹಗರಣಕ್ಕೆ ಸಂಬಂಧಿಸಿದ ನೀರಾ ರಾಡಿಯಾ ಮತ್ತು ಕನಿಮೋಳಿ ನಡುವಣ ಸಂಭಾಷಣೆ ಲೀಕ್ ಆದದ್ದೇ ಮುಳುವಾಗಿ, ಭ್ರಷ್ಟಾಚಾರದ ಆರೋಪ ಸುತ್ತಿಕೊಂಡಿತು. ಕೆಲವು ಟೆಲಿಕಾಂ ಕಂಪೆನಿಗಳಿಗೆ ಕಡಿಮೆ ದರದಲ್ಲಿ ತರಂಗಾಂತರ ಮಾರಾಟ ಮಾಡಿದ್ದ ಕೇಂದ್ರ ಸಚಿವ ರಾಜಾ ಅವರ ಭ್ರಷ್ಟಾಚಾರದಲ್ಲಿ ಕನಿಮೋಳಿ ಪಾಲೂ ಇದೆ ಎಂಬುದು ಖಚಿತವಾಯಿತು. ದುಬಾರಿ ವಕೀಲರನ್ನು ಹಿಡಿದು ವಾದಿಸಿದರೂ ತಿಹಾರ್ ಜೈಲುವಾಸ ತಪ್ಪಲಿಲ್ಲ.

ಒಂದು ಕಾಲದಲ್ಲಿ ಕನಿಮೋಳಿ ಡಿಎಂಕೆ ಪಕ್ಷದ 'ಕಲೆ, ಸಾಹಿತ್ಯ, ವಿಚಾರವಾದ ಘಟಕ'ದ ಮುಖ್ಯಸ್ಥೆ ಆಗಿದ್ದರು. ಸಿನಿಮಾ ಸಾಹಿತ್ಯದಲ್ಲಿ ಮಿಂಚಿದ್ದ ತಂದೆ ಕರುಣಾ-ನಿಧಿಯ ಸಾಹಿತ್ಯಕ ಉತ್ತರಾಧಿಕಾರಿ ಎಂದೂ ಈಕೆಯನ್ನು ಬಣ್ಣಿಸಲಾಗಿತ್ತು. ಲಂಕಾ ತಮಿಳರು ಮತ್ತು ಹಿಜಡಾಗಳ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ವಿಶೇಷ ಆಸ್ಥೆ ತಳೆದಿದ್ದ ಕನಮೋಳಿ, ಪಕ್ಷದ ಉದ್ಯೋಗ ಮೇಳಗಳ ಮೂಲಕ ತಮಿಳುನಾಡಿನಲ್ಲಿ ಸುದ್ದಿ ಮಾಡಿದ್ದರು. ಈ ಮೇಳಗಳಲ್ಲಿ 70 ಸಾವಿರ ನಿರುದ್ಯೋಗಿಗಳಿಗೆ ಕೆಲಸ ಸಿಕ್ಕಿದೆಯಂತೆ. ಸದ್ಯಕ್ಕೆ ಜೈಲಿನಲ್ಲಿ ಸ್ವತಃ ಕನಿಮೋಳಿಯೇ ನಿರುದ್ಯೋಗಿ!

ಕರುಣಾನಿಧಿಯ ಮೂರನೆ ಹೆಂಡತಿ ರಜತಿ ಅಮ್ಮಾಳ್ ಮಗಳು ಕನಿಮೋಳಿ. ಮೊದಲು ಶಿವಕಾಶಿಯ ಉದ್ಯಮಿ ಅವಿಭಜ್ ಬೋಸ್ ಜತೆಗೆ ಆದ ಮದುವೆ ಬರಖತ್ತಾಗಲಿಲ್ಲ. ಆ ಬಳಿಕ ಸಿಂಗಾಪುರದ ತಮಿಳು ಲೇಖಕ ಜಿ.ಅರವಿಂದನ್‌ರನ್ನು ಮದುವೆಯಾದರು. ಪ್ರತಿಷ್ಠಿತ ಕುಟುಂಬದ ಬಲ, ಅಧಿಕಾರ ಮತ್ತು ಹಣವಿದ್ದರೆ ಏನನ್ನೂ ಮಾಡಿ ದಕ್ಕಿಸಿಕೊಳ್ಳಬಹುದು ಎಂದು ಭಾವಿಸಿದವರು ಒಮ್ಮೆ ಕನಿಮೋಳಿಯ ಸ್ಥಿತಿಯನ್ನು ಗಮನಿಸುವುದು ಒಳ್ಳೆಯದು!




## ಮತ್ತೆ ಬೋಲ್ಟ್!

ಯಂತ್ರಗಳಿಗೆ ಮಾತ್ರವಲ್ಲ, ಮನುಷ್ಯರಿಗೂ ದೇಹದ ನಟ್ಟು–ಬೋಲ್ಟ್‌ಗಳು ಕೈಕೊಡುವುದಿದೆ! ಓಟದ ಟ್ರ್ಯಾಕ್‌ನ ವಿಶ್ವದಾಖಲೆ ವೀರ ಉಸ್ಸೇನ್ ಬೋಲ್ಟ್‌ಗೂ ಆಗಿದ್ದು ಅದೇ. ಪೃಷ್ಠದ ನೋವಿನಿಂದ ಒಂದು ವರ್ಷ ಕಾಲ ಟ್ರ್ಯಾಕ್‌ನಿಂದ ಹೊರಬಿದ್ದಿದ್ದ ಉಸ್ಸೇನ್ ಬೋಲ್ಟ್ ಮತ್ತೆ ಟ್ರ್ಯಾಕ್‌ಗೆ ಮರಳಿದ್ದಾನೆ. 200 ಮೀಟರ್ ಓಟವನ್ನು 19.86 ಸೆಕೆಂಡುಗಳಲ್ಲಿ ಓಡಿ ಮತ್ತೆ ಚಿನ್ನ ಗೆದ್ದಿದ್ದಾನೆ.

ಆದರೆ ಇದೇನೂ ಬೋಲ್ಟ್‌ನ ಅತ್ಯುತ್ತಮ ಸಾಧನೆಯಲ್ಲ. ಆತನ ಹೆಸರಿನ ವಿಶ್ವದಾಖಲೆ ಇರುವುದು 19.19 ಸೆಕೆಂಡ್ಸ್! 100 ಮೀಟರ್ ಓಟದಲ್ಲೂ ಆತನೇ ವಿಶ್ವ ಚಾಂಪಿಯನ್– ಅಲ್ಲಿ ಆತನ ವಿಶ್ವದಾಖಲೆಯ ವೇಗ 9.58 ಸೆಕೆಂಡ್ಸ್! 4–100 ಮೀಟರ್ ರಿಲೇನಲ್ಲೂ ಸಂಗಡಿಗರ ಜತೆ ಸೇರಿ ವಿಶ್ವದಾಖಲೆ ಮಾಡಿರುವ ಬೋಲ್ಟ್ ಸದ್ಯ ಈ ಮೂರೂ ಓಟಗಳಲ್ಲಿ ವಿಶ್ವದಾಖಲೆಯ ಒಲಿಂಪಿಕ್ ಚಿನ್ನ ವಿಜೇತ ಕೂಡಾ!

ಎಳೆಯ ವಯಸ್ಸಿನಿಂದಲೇ ಓಡುತ್ತಿರುವ ಜಮೈಕಾದ ಬೋಲ್ಟ್ ಜೂನಿಯರ್ ವಿಭಾಗದಲ್ಲಿ ಮಾಡಿದ ವಿಶ್ವದಾಖಲೆ ಈಗಲೂ ಹಾಗೆಯೇ ಉಳಿದಿದೆ. 200 ಮೀಟರ್ ಓಟವನ್ನು ಈವರೆಗೆ ಯಾವ ಜೂನಿಯರ್ ಅಥ್ಲೀಟ್ ಕೂಡಾ 20 ಸೆಕೆಂಡಿಗಿಂತ ಕಡಿಮೆ ಅವಧಿಯಲ್ಲಿ ಓಡಿಲ್ಲ– ಬೋಲ್ಟ್‌ನನ್ನು ಬಿಟ್ಟು! ಅದಕ್ಕೆಂದೇ ಈತನಿಗೆ ಕ್ರೀಡಾಪ್ರೇಮಿಗಳು ಇಟ್ಟಿರುವ ಹೆಸರು– ಮಿಂಚು!

ಬೋಲ್ಟ್ ಗಾಯಗೊಂಡು ರಜೆಯಲ್ಲಿದ್ದಾಗ ನಡೆದ ಸಮ್ಮರ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಟೈಸನ್ ಗ್ರೇ ಎಂಬ ಓಟಗಾರ 9.69 ಸೆಕೆಂಡುಗಳಲ್ಲಿ 100 ಮೀಟರ್ ಚಿನ್ನ ಗೆದ್ದಿದ್ದಾನೆ. 'ಮುಂದಿನ ಕೆಲವು ತಿಂಗಳಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಈ ಅವಧಿಯನ್ನು 9.7ಕ್ಕಿಂತಲೂ ಕೆಳಕ್ಕೆ ಇಳಿಸುತ್ತೇನೆ' ಎಂದೂ ಆತ ಬೆದರಿಕೆ ಹಾಕಿದ್ದಾನೆ.

ಕಳೆದ ಆಗಸ್ಟ್‌ನಲ್ಲಿ ಸ್ಟಾಕ್‌ಹೋಂನಲ್ಲಿ ಇದೇ ಗ್ರೇ 100 ಮೀಟರ್ ಓಟದಲ್ಲಿ ಬೋಲ್ಟ್‌ನನ್ನು ಹಿಂದಕ್ಕೆ ತಳ್ಳಿ, ಚಿನ್ನ ಗಳಿಸಿದ್ದ. ಇನ್ನೀಗ 2 ತಿಂಗಳಲ್ಲಿ ಇನ್ನೊಂದು ಟ್ರ್ಯಾಕ್ ರೇಸ್‌ನಲ್ಲಿ ಇಬ್ಬರೂ ಒಟ್ಟಿಗೇ ಓಡಲಿದ್ದಾರೆ. 'ನಾನೇನೂ ಹೆದರಿಲ್ಲ' ಎಂದಿದ್ದಾನೆ ಉಸ್ಸೇನ್! ಕ್ರೀಡಾ ಜಗತ್ತು ಆ ಓಟಕ್ಕಾಗಿ ಕಾಯುತ್ತಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65